

# ಕಪ್ಪು ಬಿಳುಪು ಕೂಡಿ ಬೂದು ಬಣ್ಣದ ಮೋಡಿ

ಹೆಜ್ಜೆ ಹೆಜ್ಜೆಗೂ ಶುದ್ಧತೆಯನ್ನು ಬಯಸುವವರು ನಾವು. ಆದರೆ ಈ ಜಗತ್ತಿನಲ್ಲಿ ನಿಜವಾಗಿಯೂ ಶುದ್ಧ ಅನ್ನುವುದು ಇದೆಯೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕುವ ಮ್ಯೂಸಿಕಲ್ ಕಿರುಚಿತ್ರ 'ರೋಲ್‌ಕಾಲ್'.

■ ಗೌರಿ

ನಾವು ಯಾವಾಗಲೂ ಗೊಂದಲವಿಲ್ಲದ್ದನ್ನು ಬಯಸುತ್ತಿರುತ್ತೇವೆ. ಮನುಷ್ಯನನ್ನು ಒಳ್ಳೆಯವರು ಕೆಟ್ಟವರು ಎಂದು ಎರಡರಲ್ಲಿ ಯಾವುದಾದರೊಂದು ಕೆಟಗೆರಿಯಲ್ಲಿ ಇಟ್ಟು ನೋಡಲು ಬಯಸುತ್ತೇವೆ. ನಾವು ನೋಡುವ ಸಿನಿಮಾಗಳಲ್ಲಿಯೂ ಅಷ್ಟೇ – ಹೀರೊ ಮತ್ತು ವಿಲನ್ ಒಳ್ಳೆಯವ ಕೆಟ್ಟವರ ಪ್ರತಿನಿಧಿಯಾಗಿಯೇ ಇರುತ್ತಾರೆ. ನೂರು ಜನರನ್ನು ಕೊಂದರೂ ಹೀರೊ ಒಳ್ಳೆಯವನೇ. ಹತ್ತಾರು ಒಳ್ಳೆಯ ಕೆಲಸಗಳನ್ನು ಮಾಡಿದರೂ ವಿಲನ್ ಕೆಟ್ಟವನೇ. ಅದರಲ್ಲಿ ನಮಗೆ ಯಾವ ಗೊಂದಲವೂ ಇಲ್ಲ. ಯಾಕೆಂದರೆ ನಾವು ಗೊಂದಲವನ್ನು ಬಯಸುವುದಿಲ್ಲ.

ಆದರೆ ಬದುಕಿನ, ನಾವು ಬದುಕುತ್ತಿರುವ ಸಮಾಜದಲ್ಲಿನ ಹಲವು ಸಂಗತಿಗಳು ಹೀಗೆ ಒಳ್ಳೆಯದು–ಕೆಟ್ಟದ್ದು, ಸರಿ–ತಪ್ಪುಗಳು ಕಪ್ಪು ಬಿಳುಪು ಬಣ್ಣದಲ್ಲಿ ಇರುವುದಿಲ್ಲ. ಅವೆರಡೂ ಬೆರೆತ ಬೂದುಬಣ್ಣದಲ್ಲಿಯೇ ನಮ್ಮ ಬದುಕು, ಸಂಬಂಧಗಳು, ಸಾಮಾಜಿಕ ವ್ಯವಸ್ಥೆ, ನೈತಿಕ ಮೌಲ್ಯಗಳು ರೂಪುತಳೆದಿರುತ್ತವೆ. ಅವುಗಳನ್ನು ನಾವು ಕಪ್ಪು ಅಥವಾ ಬಿಳುಪು ಎಂಬ ಯಾವುದೋ ಒಂದು ಬಣ್ಣಕ್ಕೆ ಅಂಟಿಸಲು ಸದಾ ಯತ್ನಿಸುತ್ತಲೇ ಇರುತ್ತೇವೆ.

ಇಂದು ಮನುಷ್ಯ ಸಮಾಜವೇ, ಅದು ಇಲ್ಲವೇ ಇದು ಎಂದು ಎರಡು ಹೋಳುಗಳಾಗಿ ಸೀಳಿಹೋಗುತ್ತಿರುವ ದುರಂತಕ್ಕೆ ನಾವೆಲ್ಲರೂ ಸಾಕ್ಷಿಯಾಗುತ್ತಿದ್ದೇವೆ. ಆದರೆ ಕ್ಷಣವೊಂದಕ್ಕೆ ಸಾವಿರ ಸಾವಿರ ಆಲೋಚನೆಗಳನ್ನು ಮನಸಲ್ಲಿ ಹುಟ್ಟಿ ಸಾಯುತ್ತಿರುವಾಗ, ಹೆಜ್ಜೆ ಹೆಜ್ಜೆಗೂ ದೃಷ್ಟಿ ದೃಷ್ಟಿಕೋನಗಳು ಬದಲಾಗುತ್ತಲೇ ಇರುವಾಗ, ಪರಿಸ್ಥಿತಿಗಳು ರೂಪಾಂತರಗೊಳ್ಳುತ್ತ ಬೇಸ್ತು ಬೀಳಿಸುತ್ತಿರುವಾಗ ಮನುಷ್ಯನ ವ್ಯಕ್ತಿತ್ವವನ್ನು ಯಾವುದೋ ಒಂದು ಬಗೆಯ ಬಣ್ಣದಲ್ಲಿ ಗುರ್ತಿಸಲು ಸಾಧ್ಯವೇ? ಹಾಗೆ ಸಾಧ್ಯವಾಗುವುದಾದರೆ ಆ ಮನುಷ್ಯನ ಮಾನಸಿಕತೆ ಜಡ ಎಂದೇ ಹೇಳಬೇಕಾಗುತ್ತದಲ್ಲವೇ?





ಹೆಸರು: ರೋಲ್‌ಕಾಲ್
ನಿರ್ದೇಶನ: ಕ್ಯಾರೊಲಿನಾ ವೈರ್‌ವಾಲ್ ಮತ್ತು ಗಿಯಾಕೊಮೊ ಕೊರ್ವಾಲಿಯಾ
ತಾರಾಗಣ: ಎಲಿಜಾವೇಟಾ ಪೊಲ್ಯಾಕೋವಾ

ಕ್ಯಾರೊಲಿನಾ ವೈರ್‌ವಾಲ್ ಮತ್ತು ಗಿಯಾಕೊಮೊ ಕೊರ್ವಾಲಿಯಾ ರೂಪಿಸಿದ 'ರೋಲ್ ಕಾಲ್' ಎಂಬ ಮ್ಯೂಸಿಕಲ್ ಕಿರುಚಿತ್ರ ಇದೇ ಸಂಗತಿಗಳನ್ನು ಸಾಂಕೇತಿಕವಾಗಿ ಕಟ್ಟಲು ಪ್ರಯತ್ನಿಸುತ್ತದೆ. ಅಚ್ಚಬಿಳುಪು ಬಟ್ಟೆ ತೊಟ್ಟುಕೊಂಡಿರುವ ಹುಡುಗಿಯೊಬ್ಬಳು ಬೆಳ್ಳನೆ ಕುರ್ಚಿಯಲ್ಲಿ ಕೂತಿದ್ದಾಳೆ. ಅವಳ ಎದುರಿಗೆ ಅಷ್ಟೇ ಬಿಳುಪಿನ ಒಂದು ತಟ್ಟೆ ಮತ್ತೆ ಕಪ್ ಇದೆ. ಆದರೆ ಅದರ ಅಡಿಯಲ್ಲಿ ಬಿದ್ದ ನೆರಳು ಕಪ್ಪು. ನೆರಳಿನ ಕಪ್ಪು ದಾಟಿ ಆ ತಟ್ಟೆಯನ್ನು ಮುಟ್ಟಲಿಕ್ಕೇ ಸಾಧ್ಯವಿಲ್ಲ.

ಬೆಳ್ಳನೆ ಹುಡುಗಿಯ ತಲೆಕೂದಲು ಕಡುಗಪ್ಪು. ಅವಳ ಮುಖಕ್ಕೆ ಕಡುಗಪ್ಪಿನ ಪಂಜರವೊಂದು ಸುತ್ತಿಕೊಂಡಿದೆ. ಹೀಗೆ ಪರಸ್ಪರ ವಿರುದ್ಧ ಎನ್ನುವ ಬಣ್ಣಗಳು ಕಲೆಯುವ ಅಮೂರ್ತ ಚಿತ್ರಣದ ಮೂಲಕವೇ ನಿರ್ದೇಶಕರು ಸಂವಹಿಸುತ್ತ ಹೋಗುತ್ತಾರೆ. ಬೆಳ್ಳಾನೆ ಬೆಳ್ಳಗಿನ ಬಟ್ಟೆ ಮೇಲೆ ಬಿದ್ದ ಕಪ್ಪು ಶಾಯಿಯ ಚಿತ್ರ, ಕಪ್ಪು ಬಿಳುಪು ಎರಡೂ ವಯರ್‌ಗಳನ್ನು ಹುಡುಗಿ ಜಗಿದು ಜಗಿದು ತಿನ್ನುವ ಇಮೇಜ್, ತನ್ನ ಮುಖಕ್ಕೆ ಸುತ್ತಿರುವ ಪಂಜರ ಹರಿಯುವ ಚಿತ್ರ... ಹೀಗೆ ಅಮೂರ್ತ ಇಮೇಜ್‌ಗಳ ಮೂಲಕವೇ ನಿರ್ದೇಶಕರು ಶುದ್ಧ ಕಪ್ಪು ಅಥವಾ ಶುದ್ಧ ಬಿಳಿ ಎನ್ನುವುದು ಇರಲು ಸಾಧ್ಯವಿಲ್ಲ. ಅವೆರಡೂ ಒಂದರೊಳಗೊಂದು ಬೆರೆತುಕೊಂಡೇ ಇರುತ್ತವೆ, ಬದುಕಿನ ಹಾಗೆ ಎಂಬುದನ್ನು ಕಾಣಿಸುತ್ತ ಹೋಗುತ್ತಾರೆ.

ಬೆಳ್ಳಗಿನ ತಟ್ಟೆಯೊಳಗೆ ಬೂದು ಬಣ್ಣದ ದ್ರವ್ಯ ಬರುವುದು, ಅದರಲ್ಲಿ ಹುಡುಗಿ ಕೈಯದ್ದಿ ಮೈಯೆಲ್ಲ ಬಳಿದುಕೊಂಡು ಕೊನೆಗೆ ಕುಡಿದೂ ಬಿಡುವುದು ಹೀಗೆ ಕಪ್ಪು ಬಿಳುಪುಗಳು ಸೇರಿದ ಬೂದು ಬಣ್ಣದಲ್ಲಿಯೇ ಮನುಷ್ಯನ ವ್ಯಕ್ತಿತ್ವ ರೂಪುಗೊಂಡಿರುತ್ತದೆ ಎಂಬುದನ್ನು ಸೂಚಿಸುತ್ತದೆ.

ಕೇವಲ ಐದು ನಿಮಿಷದ ಈ ಮ್ಯೂಸಿಕಲ್ ಕಿರುಚಿತ್ರವನ್ನು ಬರಿದೇ ಒಂದು ಹಾಡಾಗಿಯೂ ಆಸ್ವಾದಿಸಬಹುದು.

ಈ ಕಿರುಚಿತ್ರ ವೀಕ್ಷಣೆಗೆ bit.ly/2RK09J9 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.